# ‘ದೊರೆಯ ಭಾಷಣ’ಕ್ಕೆ ಅಕಾಡೆಮಿ ಕಿರೀಟ



ನಿರ್ದೇಶಕ ಟಾಮ್ ಹೂಪರ್

‘ದಿ ಕಿಂಗ್ಸ್ ಸ್ಪೀಚ್’ ಚಿತ್ರ ಈ ವರ್ಷದ ಅಕಾಡೆಮಿ (ಆಸ್ಕರ್) ಪ್ರಶಸ್ತಿಗಳಲ್ಲಿ ನಾಲ್ಕನ್ನು ಬಾಚಿಕೊಂಡಿದೆ. ಜಾಗತಿಕ ಚಿತ್ರರಂಗದ ಅತ್ಯಂತ ಪ್ರತಿಷ್ಠಿತ ಎಂದೇ ಪರಿಗಣಿತವಾದ ಆಸ್ಕರ್ ಪ್ರಶಸ್ತಿಯ ಪಟ್ಟಿಯಲ್ಲಿ ಚಿತ್ರದ ನಿರ್ದೇಶಕ ಟಾಮ್ ಹೂಪರ್, ಮೂಲ ಲೇಖಕ ಡೇವಿಡ್ ಸೀಡ್ಲರ್, ನಟ ಕಾಲಿನ್ ಫಿರ್ಥ್ ಮೂವರ ಹೆಸರುಗಳೂ ರಾರಾಜಿಸಿವೆ. ಅತ್ಯುತ್ತಮ ಚಿತ್ರ, ಅತ್ಯುತ್ತಮ ನಿರ್ದೇಶಕ, ಅತ್ಯುತ್ತಮ ನಟ ಹಾಗೂ ಅತ್ಯುತ್ತಮ ಮೂಲ ಚಿತ್ರಕಥೆ– ಹೀಗೆ ನಾಲ್ಕು ಆಸ್ಕರ್‌ಗಳು ಈ ಚಿತ್ರದ ಮುಡಿಗೇರಿವೆ. ಇದಕ್ಕೂ ಮುನ್ನ ಈ ಚಿತ್ರ ಏಳು ಬಾಫ್ಟಾ ಪ್ರಶಸ್ತಿಗಳನ್ನೂ, ಒಂದು ಗೋಲ್ಡನ್ ಗ್ಲೋಬ್ ಪ್ರಶಸ್ತಿಯನ್ನೂ ಪಡೆದುಕೊಂಡಿದೆ. ಎಲ್ಲೆಡೆಯಲ್ಲೂ ಈಗ ‘ದೊರೆಯ ಭಾಷಣ’ದ್ದೇ ಮಾತು.

ಇಂಗ್ಲೆಂಡಿನ ದೊರೆ ಆರನೇ ಜಾರ್ಜ್‌ಗೆ ಯುವಕನಾಗಿದ್ದಾಗಲೇ ಇದ್ದ ಮಾತಿನ ಉಗ್ಗುವಿಕೆಯ ಸಮಸ್ಯೆಯೇ ಈ ಚಿತ್ರದ ಕೇಂದ್ರಬಿಂದು. ಈ ಉಗ್ಗುವಿಕೆಯಿಂದ ಹೊರಬರಲು ದೊರೆ ನಡೆಸುವ ಪ್ರಯತ್ನಗಳು; ಲಯನೆಲ್ ಲಾಂಗ್ ಎಂಬ ಆಸ್ಟ್ರೇಲಿಯನ್ ಸ್ಪೀಚ್ ಥೆರಪಿಸ್ಟ್‌ನ ಸಹಾಯದಿಂದ ಸರಾಗ ಮಾತು ಕಲಿಯುವುದು; ಇಬ್ಬರ ನಿಕಟ ಸ್ನೇಹದಿಂದ ಅರಸೊತ್ತಿಗೆಯಲ್ಲಿ ಉಂಟಾಗುವ ತಾಕಲಾಟಗಳು– ಹೀಗೆ ಇಡೀ ಚಿತ್ರ ‘ಆಳುವವರ ಮಾತಿನ ರಾಜಕೀಯ’ ಮತ್ತು ‘ಆಡುವವರ ಮಾತಿನ ಅರಾಜಕತೆ’ಯ ಸುತ್ತ ಗಿರಕಿ ಹೊಡೆಯುತ್ತದೆ.

ಚಿತ್ರ ಆರಂಭವಾಗುವುದೇ ಸಾರ್ವಜನಿಕ ಭಾಷಣದ ದೃಶ್ಯದಿಂದ. ದೊರೆ ಐದನೇ ಜಾರ್ಜ್‌ನ ಎರಡನೆಯ ಮಗ ಡ್ಯೂಕ್ ಆಲ್ಬರ್ಟ್ ವೆಂಬ್ಲಿ ಸ್ಟೇಡಿಯಂನಲ್ಲಿ ಸೇರಿರುವ ಸಾವಿರಾರು ಜನರನ್ನು ಉದ್ದೇಶಿಸಿ ಮಾತನಾಡುತ್ತಾನೆ. ಆರಂಭದಲ್ಲೇ ಶುರುವಾದ ಉಗ್ಗುವಿಕೆಯಿಂದ ಜನ ಕಿರಿಕಿರಿ ಅನುಭವಿಸುತ್ತಾರೆ. ಈ ಉಗ್ಗುವಿಕೆಯಿಂದ ಪಾರಾಗುವುದು ಹೇಗೆ ಎಂಬುದೇ ಕಥಾವಸ್ತು. ಥೆರಪಿಸ್ಟ್ ಚಿಕಿತ್ಸೆ ನಡೆಸುತ್ತಾ ಹೋದಂತೆ ರಾಜಕುವರ ಬಾಲ್ಯದಲ್ಲಿ ಎದುರಿಸಿದ ಮನೋವೇದನೆಗಳು ಒಂದೊಂದಾಗಿ ಬಯಲಾಗಿ, ಅರಸೊತ್ತಿಗೆಯ ರಹಸ್ಯಗಳೂ ಹೊರಬರುತ್ತವೆ.

ಮೂಲ ಚಿತ್ರಕಥೆಯನ್ನು ಬರೆದಾತ ಲೇಖಕ ಡೇವಿಡ್ ಸೀಡ್ಲರ್. ವಾಸ್ತವವೆಂದರೆ ಆತನೂ ಉಗ್ಗುವಿಕೆಯಿಂದ ಬಳಲುತ್ತಿದ್ದ. ಉಗ್ಗುವಿಕೆಯಿಂದ ಹೊರಬರುವ ಯತ್ನದಲ್ಲಿದ್ದಾಗ ದೊರೆ ಆರನೆ ಜಾರ್ಜ್‌ಗೆ ಇದ್ದ ಉಗ್ಗುವಿಕೆಯ ಸಮಸ್ಯೆ ಗಮನಕ್ಕೆ ಬಂದು, ಆತ ಆ ಕುರಿತು ಕೆಲವು ಪುಸ್ತಕಗಳನ್ನು ಓದಿದ. ಇತಿಹಾಸದ ಅದೇ ಎಳೆಯನ್ನು ಇಟ್ಟುಕೊಂಡು ಕಥೆ ಬರೆದ.



ಚಿತ್ರದ ಒಂದು ದೃಶ್ಯದಲ್ಲಿ ಕಾಲಿನ್ ಫಿರ್ಥ್

ನಿರ್ದೇಶಕ ಟಾಮ್ ಹೂಪರ್ ಸಿನಿಮಾದ ಚಿತ್ರಕಥೆಯನ್ನು ರಚಿಸಿ, ಚಿತ್ರೀಕರಣ ಆರಂಭಿಸಬೇಕೆನ್ನುವಾಗ ದೊರೆಗೆ ಚಿಕಿತ್ಸೆ ನೀಡಿದ ಲಯನೆಲ್ ಲಾಗ್ ಬರೆದ ಹಳೆಯ ಟಿಪ್ಪಣಿಗಳೂ ಕೈಗೆ ಸಿಕ್ಕಿದವು. ಚಿತ್ರಕಥೆಯಲ್ಲಿ ಲಾಗ್‌ನ ಹಲವು ಹೇಳಿಕೆಗಳನ್ನೂ ಸಂಭಾಷಣೆಯ ರೂಪದಲ್ಲಿ ಸೇರಿಸಲಾಯಿತು. ಚಿತ್ರಕಥೆಗೆ ಇದರಿಂದ ಮತ್ತಷ್ಟು ಬಲ ಬಂತು.

ಜನವರಿಯಲ್ಲಿ ಲಂಡನ್ನಿನಲ್ಲಿ ಬಿಡುಗಡೆಯಾದ ಈ ಚಿತ್ರ ಈ ಬಾರಿಯ ಆಸ್ಕರ್‌ನಲ್ಲಿ ಹೆಚ್ಚಿನ ಪ್ರಶಸ್ತಿಗಳನ್ನು ಗೆಲ್ಲುವ ನಿರೀಕ್ಷೆ ಮೊದಲೇ ಇತ್ತು. ಆದರೆ ಪ್ರಶಸ್ತಿಗೂ ಮುನ್ನ ಬಾಕ್ಸಾಫೀಸ್‌ನಲ್ಲೂ ಚಿತ್ರ ಗೆದ್ದಿದೆ. ಆಸ್ಕರ್ ಗೆದ್ದ ಹಿನ್ನೆಲೆಯಲ್ಲಿ ಚಿತ್ರದ ಜಾಗತಿಕ ಗಳಿಕೆ ಹೆಚ್ಚುವುದು ಖಚಿತ. 80 ಲಕ್ಷ ಪೌಂಡ್ ವೆಚ್ಚದಲ್ಲಿ ನಿರ್ಮಾಣವಾದ ಈ ಚಿತ್ರ ಆರಂಭದ ಎರಡು ವಾರಗಳಲ್ಲೇ 24.49 ಕೋಟಿ ಡಾಲರ್ ಆದಾಯ ಗಳಿಸಿ ದಾಖಲೆ ನಿರ್ಮಿಸಿದೆ. ಜತೆಗೆ ನಿರ್ದೇಶಕ ಟಾಮ್ ಹೂಪರ್ ಮತ್ತು ನಟ ಕಾಲಿನ್ ಫಿರ್ಥ್ ಯಶಸ್ಸಿನ ಸಂಭ್ರಮದಲ್ಲಿದ್ದಾರೆ.

■ ಬಿಂದು